# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 122 |
| ಸದಸ್ಯರ ಹೆಸರು | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 10.07.2018 |
| ಉತ್ತರಿಸುವವರು | ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಉದ್ಯಾನವನಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಮಂಡ್ಯ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಉದ್ಯಾನವನಗಳ ಸಂಖ್ಯೆ:43. (ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ). |
| (ಆ) | ಸದರಿ ಉದ್ಯಾನವನಗಳ ನಿರ್ವಹಣೆಗೆ ನಗರಸಭೆ ಕೈಗೊಂಡಿರುವ ಅಗತ್ಯ ಕ್ರಮಗಳೇನು (ವಿವರ ನೀಡುವುದು) | ಪ್ರಸ್ತುತ ಲಭ್ಯವಿರುವ ನಗರಸಭೆಯ ಪಾರ್ಕ್ ವಿಭಾಗದ ಸಿಬ್ಬಂದಿಯಿಂದಲೇ ಉದ್ಯಾನವನಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಈಗಾಗಲೇ ನಗರಸಭೆಯ ಕೌನ್ಸಿಲ್ ಸಭೆಯಲ್ಲಿ 10 ಜನ ಗಾರ್ಡ್‌ನರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಅನುಮೋದನೆ ನೀಡಲಾಗಿದ್ದು, ಟೆಂಡರ್ ಮುಖಾಂತರ ಗಾರ್ಡನರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಕ್ರಮ ವಹಿಸಲಾಗುತ್ತಿದೆ. |
| (ಇ) | ಈ ಉದ್ಯಾನವನಗಳ ನಿರ್ವಹಣೆಯನ್ನು ನಗರಸಭೆಯೇ ನಿರ್ವಹಿಸುತ್ತಿದೆಯೇ; ಅಥವಾ ಹೊರಗುತ್ತಿಗೆ ನೀಡಲಾಗಿದೆಯೇ; (ವಿವರ ನೀಡುವುದು) | ನಗರದ 08 ಉದ್ಯಾನವನಗಳು ಅಮೃತ್ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಮಾಡಲಾಗುತ್ತಿದ್ದು, ಈ ಯೋಜನೆಯಲ್ಲಿ 08 ಉದ್ಯಾನವನಗಳ ನಿರ್ವಹಣೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಕಾಮಗಾರಿ ಪೂರ್ಣಗೊಂಡ ನಂತರ 5 ವರ್ಷಗಳ ಅವಧಿವರೆಗೆ ಗುತ್ತಿಗೆದಾರರೇ ಉದ್ಯಾನವನಗಳನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ. ನಂತರ ನಗರಸಭೆ ವತಿಯಿಂದ ನಿರ್ವಹಣೆ ಮಾಡಲು ಕ್ರಮವಹಿಸಲಾಗುತ್ತದೆ (ಪಟ್ಟಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ).<br><br>03 ಉದ್ಯಾನವನಗಳ ನಿರ್ವಹಣೆಯನ್ನು ಖಾಸಗಿ/ಎನ್.ಜಿ.ಓ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ನಿರ್ವಹಿಸುತ್ತಿದ್ದಾರೆ (ಪಟ್ಟಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ). |
| (ಈ) | ಸದರಿ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಅಮೃತ್ ಯೋಜನೆಯಡಿ ಕೈಗೊಂಡಿರುವ ಉದ್ಯಾನವನಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಂಡ ನಂತರ ಗುತ್ತಿಗೆದಾರರಿಂದ 5 ವರ್ಷಗಳ ಅವಧಿಯವರೆಗೆ ನಿರ್ವಹಣೆ ಮಾಡಲು ಕ್ರಮ ವಹಿಸಲಾಗಿರುತ್ತದೆ. ಉಳಿದಂತೆ ನಗರಸಭೆಗೆ ಲಭ್ಯವಿರುವ 14ನೇ ಹಣಕಾಸು, ನಗರಸಭಾ ನಿಧಿ ಅನುದಾನದಲ್ಲಿ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸರ್ಕಾರದಿಂದ ನೀಡಲಾಗುವ ಅನುದಾನ ಹಾಗೂ ನಗರಸಭೆ ನಿಧಿಯಲ್ಲಿ ಹಂತ ಹಂತವಾಗಿ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ. |

ಸಂಖ್ಯೆ: ನಅಇ 149 ಜಿಇಎಲ್ 2018

(ರಮೇಶ್ ಎಲ್. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

## ಅನುಬಂಧ-1

| ಕ್ರ ಸಂ | ಉದ್ಯಾನವನಗಳ ವಿವರ |
|---|---|
| 1 | ಶಿವಕುಮಾರ ಸ್ವಾಮೀಜಿ ಪಾರ್ಕ್,ಸ್ವರ್ಣಸಂದ್ರ. |
| 2 | ಸುಧೀರ್ ಪಾರ್ಕ್, ಸ್ವರ್ಣಸಂದ್ರ. |
| 3 | ಶ್ರೀ ಶನಿಮಹಾತ್ಮ ದೇವಸ್ಥಾದ ಹತ್ತಿರದ ಪಾರ್ಕ್, ಸ್ವರ್ಣಸಂದ್ರ. |
| 4 | ಟ್ಯಾಂಕ್ ಪಾರ್ಕ್, ಸ್ವರ್ಣಸಂದ್ರ |
| 5 | ಮೂಡಲಗಿರಿ ಪಾರ್ಕ್ ಸ್ವರ್ಣಸಂದ್ರ |
| 6 | ಮೂಡಲಗಿರಿ ಪಾರ್ಕ್‌ನ ಪಕ್ಕದ ಪಾರ್ಕ್ ಸ್ವರ್ಣಸಂದ್ರ |
| 7 | ಸ್ವರ್ಣಸಂದ್ರ ಹೌಸಿಂಗ್ ಬೋರ್ಡ್ ಪಾರ್ಕ್-1 |
| 8 | ಸ್ವರ್ಣಸಂದ್ರ ಹೌಸಿಂಗ್ ಬೋರ್ಡ್ ಪಾರ್ಕ್-2 |
| 9 | ರಾಜ್ ಕುಮಾರ್ ಬಡಾವಣೆ, ಪಾರ್ಕ್. |
| 10 | ಮಸೀದಿ ಹಿಂಭಾಗದ ಪಾರ್ಕ್,ವಿ.ವಿ ನಗರ ಮಂಡ್ಯ |
| 11 | ಮಾರಮ್ಮ ಪಾರ್ಕ್, ಉದಯಗಿರಿ. |
| 12 | ತಾವರೆಗೆರೆ ಪಾರ್ಕ್, ಉದಯಗಿರಿ. |
| 13 | ತಾವರೆಗೆರೆ ಪಾರ್ಕ್. ಚಲುವಯ್ಯ ಪಾರ್ಕ್-1 |
| 14 | ಟ್ಯಾಂಕ್ ಪಾರ್ಕ್, ತಾವರೆಗೆರೆ. ಚಲುವಯ್ಯ ಪಾರ್ಕ್-2 |
| 15 | ಚನ್ನಯ್ಯ ಪಾರ್ಕ್, ಹಾಲಹಳ್ಳಿ. |
| 16 | ಬಿಸಿಲು ಮಾರಮ್ಮ ದೇವಸ್ಥಾನದ ಪಾರ್ಕ್, ಹಾಲಹಳ್ಳಿ. |
| 17 | ಅಶೋಕನಗರದ ಬಾಲ ಭವನದ ಪಾರ್ಕ್, ಅಶೋಕನಗರ. |
| 18 | ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರದ ಪಾರ್ಕ್. |
| 19 | ಸಿಲ್ವರ್ ಜ್ಯುಬಿಲಿ ಪಾರ್ಕ್ . |
| 20 | ನಗರಸಭೆ ಮುಂಭಾಗದ ಪಾರ್ಕ್ ಗಾಂಧಿ ಪಾರ್ಕ್ |

| | |
|---|---|
| 21 | ಸುಶೀಲಮ್ಮ ನರ್ಸಿಂಗ್ ಮುಂಭಾಗದ ಪಾರ್ಕ್,ವಿದ್ಯಾನಗರ. |
| 22 | ಶಿವನಂಜಪ್ಪ ಪಾರ್ಕ್.ಸುಭಾಷ್ ನಗರ. |
| 23 | ಡಿ.ಸಿ-ಕಛೇರಿ ಹಿಂಭಾಗದ ಪಾರ್ಕ್. |
| 24 | ಕೃಷಿ ಫೌಂಡೇಶನ್ ಪಕ್ಕದ ಪಾರ್ಕ್, ಹೌಸಿಂಗ್ ಬೋರ್ಡ್ |
| 25 | ಡಬಲ್ ಪಾರ್ಕ್, 2ನೇ ಹಂತ ಹೌಸೀಂಗ್ ಬೋರ್ಡ್-1 |
| 26 | ಡಬಲ್ ಪಾರ್ಕ್, 2ನೇ ಹಂತ ಹೌಸೀಂಗ್ ಬೋರ್ಡ್-2 |
| 27 | ಶಂಕರ್ ರವರ ಮನೆಯ ಹತ್ತಿರದ ಪಾರ್ಕ್, ಹೌಸಿಂಗ್ ಬೋರ್ಡ್ |
| 28 | ಪ್ರಕಾಶ್ ಮನೆ ಮುಂಭಾಗದ ಪಾರ್ಕ್,ಹೌಸಿಂಗ್ ಬೋರ್ಡ್ |
| 29 | ಬಲಮುರಿ ದೇವಸ್ಥಾನ ಹತ್ತಿರದ ಪಾರ್ಕ್, ಕುವೆಂಪುನಗರ. |
| 30 | ಬಂದೀಗೌಡ ಬಡಾವಣೆ ಪಾರ್ಕ್, |
| 31 | ಬಂದೀಗೌಡ ಬಡಾವಣೆ-ಟ್ಯಾಂಕ್ ಪಾರ್ಕ್. |
| 32 | ಗುಂಡೂರಾವ್ ಪಾರ್ಕ್, ಅಂಬೇಡ್ಕರ್ ಸರ್ಕಲ್. |
| 33 | ಅಂಬುಜಮ್ಮ ಮನೆಯ ಹತ್ತಿರದ ಪಾರ್ಕ್, ಶಂಕರ-ನಗರ. |
| 34 | ಸಾಹುಕಾರ್ ಚನ್ನಯ್ಯ ಬಡಾವಣೆ ಪಾರ್ಕ್, ಗುತ್ತಲು |
| 35 | ಗುತ್ತಲು ಹರಿಜನ ಕಾಲೋನಿ ಪಾರ್ಕ್,ಗುತ್ತಲು. |
| 36 | ಚಿಕ್ಕೇಗೌಡನದೊಡ್ಡಿ ಪಾರ್ಕ್. |
| 37 | ಷುಗರ್ ಟೌನ್ ಪಾರ್ಕ್-1 |
| 38 | ಬಿ.ವಿ.ಕೆ ಲೇಔಟ್ ಪಾರ್ಕ್ |
| 39 | ಮಿಲ್ ಮುಂಭಾಗ ಕುವೆಂಪುನಗರ |
| 40 | ಮರೀಗೌಡ ಬಡಾವಣೆ 3ನೇ ಕ್ರಾಸ್ ಬನ್ನೂರು ರಸ್ತೆ |
| 41 | ಮರೀಗೌಡ ಬಡಾವಣೆ 2ನೇ ಕ್ರಾಸ್ ಡಾ॥ ಚಂದ್ರಶೇಖರ ಮನೆ ಮುಂಭಾಗ ಪಾರ್ಕ್ |
| 42 | ಷುಗರ್ ಟೌನ್ ಪಾರ್ಕ್-2 |
| 43 | ಸೋಮೇಶ್ವರ ಸಮುದಾಯ ಭವನದ ಪಕ್ಕದ ಪಾರ್ಕ್ |

## ಅನುಬಂಧ-2

ಅಮೃತ್ ಯೋಜನೆಯಡಿ ಅಭಿವೃದ್ಧಿಪಡಿಸಿದ ಉದ್ಯಾನವನಗಳು, ನಗರಸಭೆ, ಮಂಡ್ಯ.

| ಕ್ರ ಸಂ. | ಉದ್ಯಾನವನಗಳ ಹೆಸರು |
|---|---|
| 1. | ಬಾಲಭವನ ಉದ್ಯಾನವನ |
| 2. | ಜೋಡಿ ಉದ್ಯಾನವನ |
| 3. | ಸುಧೀರ್ ಉದ್ಯಾನವನ |
| 4. | ಶಿವನಂಜಪ್ಪ ಉದ್ಯಾನವನ |
| 5. | ವೆಂಕಟಗಿರಿಯಪ್ಪ ಉದ್ಯಾನವನ |
| 6. | ಬಲಮುರಿ ಗಣಪತಿ ಉದ್ಯಾನವನ |
| 7. | ಚಾಮುಂಡೇಶ್ವರಿ ನಗರ ಉದ್ಯಾನವನ |
| 8. | ಸೋಮೇಶ್ವರ ಸಮುದಾಯ ಉದ್ಯಾನವನ |

## ಅನುಬಂಧ – 3

ಮಂಡ್ಯ ನಗರಸಭೆ ವ್ಯಾಪ್ತಿಯ 03 ಉದ್ಯಾನವಗಳ ನಿರ್ವಹಣೆಯನ್ನು ಖಾಸಗಿ / ಎನ್.ಜಿ.ಓ ಸಂಸ್ಥೆಗಳು ನಿರ್ವಹಣೆ ಮಾಡಲಾಗುತ್ತಿದ್ದು ಅವುಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರಸಂ | ಉದ್ಯಾನವನಗಳ ಹೆಸರು | ನಿರ್ವಹಣೆ ಮಾಡುತ್ತಿರುವ ಖಾಸಗಿ /ಎನ್.ಜಿ.ಒ ಸಂಸ್ಥೆಯ ಹೆಸರು |
|---|---|---|
| 1. | ಮಹಾತ್ಮಗಾಂಧಿ ಪಾರ್ಕ್ | ಮಾಂಡವ್ಯ ಎಜುಕೇಷನ್ ಟ್ರಸ್ಟ್, ಮಂಡ್ಯ |
| 2. | ಶಿವಕುಮಾರ ಸ್ವಾಮಿ ಪಾರ್ಕ್ | ಕಾಯಕಯೋಗಿ ಫೌಂಡೇಷನ್, ಮಂಡ್ಯ |
| 3. | ಹೌಸಿಂಗ್ ಬೋರ್ಡ್ ಪಾರ್ಕ್ | ಡೋರ್‌ಪ್ಲಾಂಟ್ಸ್, ಬೆಂಗಳೂರು |

(signature)

**ಸರ್ಕಾರದ ಅಧೀನ ಕಾರ್ಯದರ್ಶಿ**
**ನಗರಾಭಿವೃದ್ಧಿ ಇಲಾಖೆ**